ಒಂದೇ ಜಾಗದಲ್ಲಿ ನಿಂತು ತಿರುಗಣಿ ಸುತ್ತುವ ದರ್ವೇಶಿಗಳ ಸಾಮಾ ನೃತ್ಯ ಮಾಡುವ ಸೂಫಿ ಸಂತನಂತೆ ನನ್ನನ್ನು ನಾನು ಕಲ್ಪಿಸಿಕೊಂಡು ಪುಳಕಗೊಳ್ಳುತ್ತಿದ್ದೆ! ಈ ಪುಳಕವನ್ನು ಕೊಳಕು ಮಾಡುವ ಹಾಗೆ ಜನ 'ಹಾ!!! ನಿಮ್ಮ ಹೆಸರನ್ನು ನಾನು ದಾದಾಪೀರ್ ಪಂಚರ್ ಅಂಗಡಿಯಲ್ಲೋ, ದಾದಾಪೀರ್ ಟ್ರಾವೆಲ್ಸ್ ಅಲ್ಲೋ, ದಾದಾಪೀರ್ ಎಲೆಕ್ಟ್ರಾನಿಕ್ ಶಾಪ್ ಅಲ್ಲೋ ನೋಡಿದ್ದೇನೆ' ಎಂದು ಹೇಳಿ ನನ್ನ ನಗಿಸಲು ಪ್ರಯತ್ನಿಸುತ್ತಾರೆ. ಇಂತಹ ವಿಷಯಗಳಿಗೆ ನಗುವುದು ಅಷ್ಟು ಸುಲಭವೇ?!

ಇನ್ನು ಜೈಮನ್ ವಿಷಯಕ್ಕೆ ಬರೋಣ. ನಾನೇನೋ ಜೈಮನ್ ಅನ್ನುವುದು ಒಂತರಾ ಚೆನ್ನಾಗಿದೆ ಎಂದು ಅಂದುಕೊಳ್ಳುವ ಹೊತ್ತಿಗೆ ಜನ ನೀವು ರಾಜಸ್ಥಾನದವರಾ ಎಂದು ಕೇಳಿದ್ದಾರೆ! ಒಬ್ಬೊಬ್ಬರಂತೂ ನನ್ನ ಮುಖದ ಬಣ್ಣವನ್ನೂ ಮತ್ತು ಜೈಮನ್ ಹೆಸರನ್ನೂ ತಾಳೆ ಹಾಕಿಕೊಂಡು 'ನೀವು ಕೇರಳದವರಾ?' ಎಂದು ಕೇಳಿದ್ದಾರೆ! ನನ್ನ ಹೆಸರಿನ ಉಚ್ಚಾರಣೆಯಂತೂ ದೇವರಿಗೇ ಪ್ರೀತಿ! ಒಬ್ಬರು 'ಜೈನ್' ಎಂದು ಕರೆದಿದ್ದಾರೆ. ಮತ್ತೊಬ್ಬರು 'ಜೈರಾಮ್' ಎಂದಿದ್ದಾರೆ. ಮಗದೊಬ್ಬರು 'ಜಯಮ್ಮನ್' ಎಂದಿದ್ದಾರೆ. 'ಜಾಮೂನು' ಎಂದಿದ್ದಾರೆ. ಮತ್ತೊಂದಿಷ್ಟು ಜನ ಇನ್ನೂ ಮುಂದೆ ಹೋಗಿ 'ಜೈ ಹನುಮಾನ್' ಎಂದುಬಿಟ್ಟಿದ್ದಾರೆ. ನನ್ನ ಹೆಸರು ಹೀಗೆ ಅರ್ಥವ್ಯತ್ಯಾಸ, ಧರ್ಮವ್ಯತ್ಯಾಸಗಳಾಗುವುದು ನೋಡಿ ನಾನು ಮಜಾ ತೆಗೆದುಕೊಂಡಿದ್ದೇನೆ. 'ಆಯೋ.. ನಿಮ್ ಹೆಸರು ನೆನಪಿಟ್ಟುಕೊಳ್ಳೋಕೆ ತುಂಬಾನೇ ಕಷ್ಟ ಕಣಪ್ಪ' ಎಂದು ಆಲಸಿ ರಾಗ ಹೊಮ್ಮಿಸುತ್ತಾ ಹೇಳುವಾಗ ನಾನೇ ಎಷ್ಟೋ ಸಲ 'ಮೇಡಂ, ಜೈ ಹನುಮಾನ್ ಹೆಸರಲ್ಲಿ 'ಹ' ಮತ್ತು 'ನು' ತೆಗೆದುಬಿಡಿ. ಆಗ ಆರಾಮಾಗಿ ಜೈಮಾನ್ ಆಗುತ್ತದೆ.. ನೋಡಿ, ಎಷ್ಟು ಸುಲಭ ನನ್ನ ಹೆಸರು ನೆನಪಿಟ್ಟುಕೊಳ್ಳುವುದು!' ಎಂದು ವಿವರಿಸಿದ್ದೇನೆ. ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಹೆಸರುಗಳನ್ನು ನೆನಪಿಟ್ಟುಕೊಳ್ಳುವುದು, ಕಡೇಪಕ್ಷ ಹೆಸರನ್ನು ತಪ್ಪು ಉಚ್ಚರಿಸದಂತೆ ಕರೆಯುವುದು, ಆಹ್ವಾನ ಪತ್ರಿಕೆಗಳಲ್ಲಿ ನಮೂದಿಸುವುದು ವ್ಯಕ್ತಿಗೆ ಕೊಡುವ ಗೌರವ ಎನ್ನುವುದು ನಮ್ಮ ಮನೋಲೋಕಕ್ಕೆ ಬರುವುದು ಯಾವಾಗ? ಇಂತಿಥವರ ಹೆಸರುಗಳನ್ನ ಮನಸೋ ಇಚ್ಛೆ ಕರೆಯಬಹುದು ಎನ್ನುವ ಅಸಡ್ಡೆ ಒಂದು 'ಕಮ್ಯುನಿಟಿ ಹ್ಯಾಬಿಟ್' ಆಗಿ ರೂಪುಗೊಳ್ಳುವುದು, ಸಾಂಕೇತಿಕ ರಚನೆಯಾಗಿ ರೂಪುಗೊಳ್ಳುವುದು ದಿಗಿಲುಗೊಳಿಸುತ್ತದೆ.



ಒಮ್ಮೊಮ್ಮೆ ದಾದಾಪೀರ್ ಜೈಮನ್ ಎಂದು ಪರಿಚಯಿಸಿಕೊಂಡಾಗ 'ಅದೇನದು ಹೆಸರಾ?', 'ನೀವು ಯಾವ ಪೈಕಿ?', 'ನೀವೇನು ಹಿಂದೂಗಳಾ ತುರುಕರಾ?' ಎಂದು ಮುಖಕ್ಕೆ ಹೊಡೆದ ಹಾಗೆ ಕೇಳಿದ್ದಾರೆ. ಒಬ್ಬೊಬ್ಬರಂತೂ 'ಮೊದಲದ್ದು ಮುಸಲ್ಮಾನನ ಹಾಗೆ ಎರಡನೆಯದ್ದು ಹಿಂದೂಗಳ ಹಾಗೆ ಇದೆಯಲ್ಲ ಮಚ್ಚಾ, ಏನ್ ಸಮಾಚಾರ.. ಆ!' ಎಂದು ವ್ಯಂಗ್ಯವಾಡಿದ್ದಾರೆ. ಗೆಳೆಯರ ಗೇಲಿಗೆ ನಾನೂ ಒಂದು ಕಲ್ಪಿತ ದೃಶ್ಯವನ್ನು ಹೇಳಿ ತಬ್ಬಿಬ್ಬುಗೊಳಿಸಿದ್ದು ನೆನಪಿದೆ ನನಗೆ! 'ಮಚ್ಚಾ ಮುಂದೊಂದು ದಿನ ಕೋಮು ಗಲಭೆ ಮತ್ತೊಂದು ಆಯಿತು ಅಂತ ಇಟ್ಟುಕೋ. ಆಗ ಹಿಂದೂ ರೌಡಿಗಳು ಬಂದು ನಿನ್ನ ಹೆಸರೇನೆಂದು ಕೇಳಿದರೆ ಜೈಮನ್ ಎಂದು ಹೇಳುತ್ತೇನೆ.. ಮುಸಲ್ಮಾನ್ ರೌಡಿಗಳು ಬಂದು ಕೇಳಿದರೆ ದಾದಾಪೀರ್ ಎಂದು ಹೇಳಿ ಜೀವ ಉಳಿಸಿಕೋತೀನಿ ಮಾರಾಯ!' ಎಂದು ನನ್ನ ಬುದ್ಧಿವಂತಿಕೆ ಪ್ರದರ್ಶಿಸಲು ಹೋದಾಗ ಅವರು ಅದಕ್ಕೂ ಮತ್ತೊಂದು ಹೆಜ್ಜೆ ಮುಂದೆ ಹೋಗಿ 'ಅಲ್ಲೋ, ನೀ ಹೇಳ್ತಾ ಇರೋದು ಸರಿ.ಆದ್ರೆ ಮಂಟೋ ಕಥೆಗಳಲ್ಲಿ ಬರೋ ತರ ನಿನ್ನ ಪೈಜಾಮದ ಲಾಡಿ ಕೆಳಗಿಳಿಸಿ ನೋಡಿದ್ರೆ?' ಎಂದು ಗಹಗಹಿಸಿ ನಗುತ್ತಿದ್ದುದು ನನ್ನ ಕಿವಿಯಲ್ಲಿನ್ನೂ ಇದೆ.

ಈ ಎಲ್ಲದರ ಮತ್ತೊಂದು ಮುಖವೂ ಇದೆ. ಪಿಂಜಾರ, ನದಾಫ ಮತ್ತು ದರ್ವೇಶಿ ಮುಂತಾದ ಒಬಿಸಿ ಸಮುದಾಯಕ್ಕೆ ಸೇರುವ ಜನ ಕನ್ನಡವನ್ನು ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಅವರಿಗೆ ಹೋಗಿ 'ಅಯ್ಯೋ.. ನೀವು ಕನ್ನಡವನ್ನು ಅದೆಷ್ಟು ಚೆನ್ನಾಗಿ ಮಾತನಾಡುತ್ತೀರಿ? ಮುಸಲ್ಮಾನರೆಂದು ಅನಿಸುವುದೇ ಇಲ್ಲ!' ಎನ್ನುವಾಗ ಮತ್ತೆಲ್ಲೋ ಒಂದು